ಓದುವ ಉಮೇದು. ಓದಿನ ಜೊತೆ ಬರವಣಿಗೆ ಕೂಡಾ ನನ್ನನ್ನು ವಶವರ್ತಿಯನ್ನಾಗಿಸಿಕೊಂಡಿತ್ತು. ಮನೆಯ ದೊಡ್ಡ ಅಂಗಳದ ಒಂದು ತುದಿಯಲ್ಲಿದ್ದ ಮಾವಿನಮರದ ಕೆಳಗಿನ ಕಲ್ಲುಬೆಂಚಿನ ಮೇಲೆ ಕೂತು ಬರೆದಿದ್ದೇ ಬರೆದಿದ್ದು. ಹೀಗಿದ್ದರೂ ನನ್ನ ಕತೆಗಳನ್ನು ಅನ್ಯರ ಕಣ್ಣಿಗೆ ತೋರ್ಪಡಿಸುವುದೆಂದರೆ ನನಗೆ ವಿಚಿತ್ರ ಮುಜುಗರ, ಸಂಕೋಚ. ಸುಮಾರಷ್ಟು ಬರೆದು ಗುಡ್ಡೆ ಹಾಕಿಟ್ಟುಕೊಂಡಿದ್ದರೂ, ಅಥವಾ ಮುಚ್ಚಿಟ್ಟುಕೊಂಡಿದ್ದರೂ ಆ ಕಾಲದಲ್ಲಿ ಬೆರಳೆಣಿಕೆಯಷ್ಟಿದ್ದ ವಾರ, ಮಾಸಪತ್ರಿಕೆಗಳಿಗೆ ನಾನು ಕತೆ ಕಳಿಸಿರಲಿಲ್ಲ. ಕತೆಯೊಂದನ್ನು ಪತ್ರಿಕೆಗಳಿಗೆ ಕಳಿಸಬೇಕಾದ ನಿಯಮಗಳ ಕುರಿತು ನನಗೆ ವಿಪರೀತದ ಅಜ್ಞಾನ ಇತ್ತು. ಅಂದರೆ ಹಾಳೆಯ ಒಂದೇ ಮಗ್ಗುಲಲ್ಲಿ ಬರೆದು ಕಳಿಸಬೇಕು ಇತ್ಯಾದಿಗಳ ಕುರಿತು. ಪಿ.ಯು.ಸಿ. ಅಥವಾ ಆಗಿನ ಲೆವೆನ್ತ್‌ಸ್ಟ್ಯಾಂಡರ್ಡ್ ಮುಗಿಯುತ್ತಿದ್ದಂತೆ ಹದಿನೆಂಟರ ವಯಸ್ಸಿನಲ್ಲಿ ನನ್ನ ಮದುವೆಯಾಯ್ತು. ಮುಂದೆ ಓದಲು ತೀರ್ಥಹಳ್ಳಿಗೆ ಕಾಲೇಜು ಬಂದಿರಲಿಲ್ಲ. ಕಾಲೇಜು ಉಪನ್ಯಾಸಕರಾಗಿದ್ದವರ ಕೈ ಹಿಡಿದು ಶಿವಮೊಗ್ಗಾ ಪೇಟೆ ಸೇರಿಕೊಂಡ ಮೇಲೆ ಹಳ್ಳಿಹುಡುಗಿಯ ಮುಗ್ಧತೆ, ಸಂಕೋಚ, ಹಿಂಜರಿಕೆಗಳೊಂದಿಗೆ ಬೆರಗೂ ಸೇರಿಕೊಂಡಿತು. ಮನೆಯಲ್ಲಿ ಯಾರಿಲ್ಲದಿದ್ದಾಗ ಯಥಾಪ್ರಕಾರ ನನ್ನ ಬರವಣಿಗೆ ಮುಂದುವರಿಯುತ್ತಿತ್ತು. ಹೀಗೆ ಬರೆದಿದ್ದನ್ನು ರಾಯರ ಕಣ್ಣುತಪ್ಪಿಸಿ ಒಂದೆಡೆ ಮುಚ್ಚಿಡುವುದು ನನ್ನ ರೂಢಿ. ಒಮ್ಮೆ ಈ ಕಂತೆ ಅವರ ಕಣ್ಣಿಗೆ ಬಿದ್ದು, ಅವರು ಗಟ್ಟಿಯಾಗಿ ಓದತೊಡಗಿ, ಮನೆಯಲ್ಲೊಂದು ಯುದ್ಧಕಾಂಡ. ನನ್ನ ಹತ್ತೊಂಬತ್ತರ ವಯಸ್ಸಿನಲ್ಲಿ 'ಜ್ವರ' ಎನ್ನುವ ನನ್ನ ಸ್ವಾನುಭವದ ಕತೆ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಯ್ತು. ಪತ್ರಿಕೆಯಲ್ಲಿ ಪ್ರಕಟವಾದ ನನ್ನ ಪ್ರಪ್ರಥಮ ಕತೆ ಕಂಡು, ಅಚ್ಚಾದ ನನ್ನ ಹೆಸರು ನೋಡಿ, ನನಗೆ ಸಂಭ್ರಮದ ಪರಾಕಾಷ್ಠೆ. ಈ ಹೊತ್ತಿಗೆ ಒಂದು ಪತ್ರಿಕೆಗೆ ಕತೆ ಕಳಿಸುವುದು ಹೇಗೆನ್ನುವುದರ ಕುರಿತು ನನಗೆ ತಿಳಿವಳಿಕೆ ಬಂದಿತ್ತು. ಏಕಾಂತದ ಕ್ಷಣಗಳಲ್ಲಿನ ಬರವಣಿಗೆಯನ್ನು ಲೋಕಾಂತಗೊಳಿಸುವುದರಲ್ಲಿನ ಸಂಕೋಚ ಹಿಮ್ಮೆಟ್ಟಿತ್ತು. ಹೀಗೆ ನನ್ನ ಕತೆಗಳು ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗುತ್ತಾ, ನಾನು ಜನಪ್ರಿಯತೆಯ ರುಚಿ ಕಂಡುಕೊಳ್ಳುತ್ತಿರುವಾಗ ನನ್ನ ಗಮನಕ್ಕೆ ಬರದಂತೆ ಒಂದು ಗುಸುಗುಸು ಸುದ್ದಿ ಬಂಧುವರ್ಗ ಮತ್ತು ಪರಿಚಿತ ವಲಯದಲ್ಲಿ ಸುಳಿದಾಡುತ್ತಿರುವುದನ್ನು ಬಂಧುವೊಬ್ಬರು ಉದ್ದೇಶಪೂರ್ವಕವಾಗಿಯೋ, ಅನುದ್ದೇಶಪೂರ್ವಕವಾಗಿಯೋ ನನ್ನ ಕಿವಿಗಳಿಗೆ ತಲುಪಿಸಿದರು. 'ನೀನಲ್ವಂತೆ ಕತೆ ಬರೆಯೋದು. ನಿನ್ನ ಗಂಡ ಬರೆದು ನಿನ್ನ ಹೆಸರಲ್ಲಿ ಕಳಿಸೋದಂತೆ' ಎನ್ನುವ ಸುದ್ದಿ. ನನ್ನ ಸ್ವಾಭಿಮಾನಕ್ಕೆ ಮುಕ್ಕು ಬಂದಂತಾಯ್ತು. ಮದುವೆಯಾಗುವುದಕ್ಕಿಂತಾ ಎಷ್ಟೋ ಮೊದಲೇ ನಾನು ಬರೆಯುತ್ತಿದ್ದೆ ಎನ್ನುವುದನ್ನು ಗಾಳಿಸುದ್ದಿ ಹಬ್ಬಿಸುತ್ತಿರುವವರಿಗೆ ಮನದಟ್ಟು ಮಾಡಿಸುವುದು ಹೇಗೆ? ರಾಯರ ಹಿತನುಡಿಯಿಂದ 'ಇದೊಂದು ನಗಣ್ಯ ವಿಷಯ' ಎಂದು ಅಲಕ್ಷಿಸಿ ನಾನು ಬರವಣಿಗೆ ಮುಂದುವರಿಸಿದೆ. ಮುಂದುವರಿಸುತ್ತಿದ್ದೇನೆ.

ನನ್ನ ಕಥೆಗಳ ಪಾತ್ರಗಳು ನಾನು ಸುತ್ತಮುತ್ತ ಕಾಣುವ ಮಧ್ಯಮ, ಕೆಳಮಧ್ಯಮ ವರ್ಗದ ಜೀವನದಿಂದ ನೇರವಾಗಿ ಎದ್ದುಬಂದಂತವುಗಳು. ಅವುಗಳಲ್ಲಿ ಹೆಚ್ಚಿನವು ನನ್ನ ಹಳ್ಳಿ ಬದುಕಿನ ಅನುಭವದಲ್ಲಿ ನಾನು ನೋಡಿದಂತವುಗಳು, ಕೇಳಿದಂತವುಗಳು. ಅವರ ಯೋಚನಾಧಾಟಿ, ರೀತಿನೀತಿ, ಭಾಷೆ, ಸಮಸ್ಯೆಗೆ ಅವರು ಸ್ಪಂದಿಸುವ ಪರಿ ಇತ್ಯಾದಿಗಳು ಕಥಾವಸ್ತುವಾಗಲು ಸೂಕ್ತವೆನಿಸಿದರೆ ಅವನ್ನು ನಾನು ಬಳಸಿಕೊಳ್ಳುತ್ತೇನೆ. ಹೀಗಿದ್ದರೂ ಕೂಡಾ ಉದ್ದೇಶಪೂರ್ವಕವಾಗಿ ಯಾರಿಗಾದರೂ ನೋವುಂಟುಮಾಡುವುದು ನನ್ನ ಧ್ಯೇಯವಲ್ಲ. ನನ್ನ